‘ಆ ವಿಷಯಾನ ನಳಿನೀನೇ ಹೇಳಿದ್ಲು’

‘ನಳಿನಿ ಅಂದ್ರೆ?’

‘ಚಿಕ್ಕಮ್ಮನನ್ನು ನೋಡಿಕೊಳ್ಳೋ ಹೆಂಗ್ಸು’

ಇನ್ಸ್‌ಪೆಕ್ಟರ್ ರಾಜಧಾನಿ ಆಲೋಚನೆಗೊಳಗಾದ. ತಾನು ನಳಿನಿಯನ್ನು ವಿಚಾರಿಸುವಾಗ ಆಕೆ ಈ ವಿಷಯವನ್ನು ತಿಳಿಸಿಲ್ಲ. ಅಂದರೆ ಕಾಶಮ್ಮ ಹೊರಗೆ ಹೋಗುವುದಕ್ಕೆ ನಳಿನಿ ಸಹಾಯ ಮಾಡಿದ್ದಾಳೆ!

‘ಅದಕ್ಕೆ ನೀವಿಬ್ರೂ ಬಂಡೆಗೆ ಅವರನ್ನು ಹುಡುಕಿಕೊಂಡಿ ಬಂದಿದ್ದೀರಿ?’

‘ಹೌದು, ಸಾಹೇಬ್ರೆ. ಆದ್ರೆ...’

‘ಆದ್ರೆ ನೀವಲ್ಲಿಗೆ ಹೋಗದೆ ಇಲ್ಲಿ ಸಮುದ್ರದ ಅಲೆಗಳ ಆಟವನ್ನು ನೋಡ್ತಾ ಭಾವುಕರಾಗಿ ಬಿಟ್ರಿ’

‘ಇಲ್ಲ, `ಬಂಡೆ'ಗೆ ಹೋಗಿ ವಿಚಾರಿಸಿಕೊಂಡು ಬಂದೆವು. ಕಾಕುಟ್ಟ ಬೇರೆ, ಊರಲಿಲ್ಲ. ಕಾಶಮ್ಮ ಎಲ್ಲಿ ಹೋಗಿದ್ದಾರೆನ್ನುವುದು ಗೊತ್ತಿಲ್ಲ. ಅದೇ ವಿಷಯವನ್ನು ನಾವು ಮಾತಾಡ್ತಿದ್ವಿ. ಅಷ್ಟರಲ್ಲಿ ನೀವು ಕಂಡ್ರಿ’

‘ಅದರಿಂದ ನಿಮ್ಮ ಆಲೋಚನೆಗೆ ಅಡ್ಡಿಯಾಯ್ತು, ಅಲ್ಲವೇ ಕಿರಣ?’

‘ಇಲ್ಲ’ ಕಿರಣ ನಕ್ಕು ಹೇಳಿದ. ಅಧಿಕಾರಿಯ ಮುಖ ತುಸು ಬಿಗಿದುಕೊಂಡಿತು.

‘ಕಿರಣ, ನೀನು ಮೇನಕಾ ಇಬ್ರೂ ಠಾಣೆ ಹತ್ರ ಬನ್ನಿ. ನಿಮ್ಮಿಂದ ಕೆಲವೊಂದು ಮಾಹಿತಿಗಳು ಬೇಕು. ಲಹರಿಯನ್ನು ಮಾತ್ರವಲ್ಲ, ಕಾಕುಟ್ಟ, ಕಾಶಮ್ಮ, ಹಿತೇಶ, ಭುಜಂಗೇಶರಾಯರು ಎಲ್ಲರನ್ನೂ ಪತ್ತೆ ಹಚ್ಚ ಬೇಕಿದೆ’

ಕಿರಣ ಮೇನಕಾ ಇಬ್ಬರೂ ಹಿತೇಶ ಅನ್ನುವ ಹೊಸ ಹೆಸರು ಕೇಳುತ್ತಲೇ ಒಬ್ಬರ ಮುಖ ಒಬ್ಬರು ನೋಡಿದರು.

‘ಖಂಡಿತವಾಗಿಯೂ ಬರ್ತೀವಿ. ಆದಷ್ಟು ಬೇಗ ಈ ಗೊಂದಲಗಳು ಮುಗಿದರೆ ಸಾಕು’ ಮೇನಕಾ ಕಿರಣ ಹೇಳುವ ಮೊದಲೇ ಅಧಿಕಾರಿಗೆ ಭರವಸೆಯನ್ನಿತ್ತಳು.

ಠಾಣೆಯಲ್ಲಿ ಕುಳಿತಿದ್ದ ಇನ್ಸ್‌ಪೆಕ್ಟರ್ ರಾಜಧಾನಿಯ ಮುಖದಲ್ಲಿ ಸಂತೃಪ್ತಿಯ ಕಳೆಯಿತ್ತು. ಪಿಸಿ ಸಾರಂಗ ಅಧಿಕಾರಿಯ ಎದುರಿಗೆ ನಿಂತು ಅವನ ಮಾತುಗಳಿಗಾಗಿ ಕಾದು ನಿಂತಿದ್ದ. ತನ್ನ ಸಹಾಯಕನತ್ತ ನೋಟ ಹರಿಸಿದ ಅಧಿಕಾರಿ.

‘ಹೊರಗೆ ಕುಳಿತಿರೋರನ್ನ ಒಳಗೆ ಕಳ್ಸು’

ಅಧಿಕಾರಿಯ ಅಣತಿಗೆ ಕಾದಿದ್ದವರಂತೆ ಸಾರಂಗ ತಲೆಯಲುಗಿಸಿ ಹೊರಗೆ ಬಂದ. ಒಂದಕ್ಕೊಂದು ಪೋಣಿಸಿದಂತಿದ್ದ ಪ್ಲಾಸ್ಟಿಕ್ ಬಕೆಟ್ ಚೇರ್‌ನಲ್ಲಿ ಕುಳಿತಿದ್ದ ಮೇನಕಾ ಮತ್ತು ಕಿರಣನನ್ನು ಕರೆದ.

‘ಸಾಹೇಬ್ರು ನಿಮ್ಮನ್ನು ಕರೀತಾವ್ರೆ’

ಇಬ್ಬರೂ ಎದ್ದು ನಿಂತು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಇನ್ಸ್‌ಪೆಕ್ಟರ್ ತಮ್ಮನ್ನು ಠಾಣೆಗೆ ಕರೆಸಿ ಅರ್ಧಗಂಟೆಯಾದರೂ ಭೇಟಿಯಾಗಿರಲಿಲ್ಲ. ಅನುಮಾನ ಇಬ್ಬರಿಗೂ ಇತ್ತು.

ಇನ್ಸ್‌ಪೆಕ್ಟರ್‌ನ ಕ್ಯಾಬಿನ್‌ನ ಬಾಗಿಲಿಗೆ ನಿಂತಾಗ ಅವರಿಬ್ಬರನ್ನೂ ಒಳಗೆ ಕರೆದ ಅಧಿಕಾರಿ.

‘ಬನ್ನಿ’ ಎದುರಿಗಿನ ಚೇರನ್ನು ತೋರಿಸಿ ಕುಳಿತುಕೊಳ್ಳುವಂತೆ ಸೂಚಿಸಿದ. ಇಬ್ಬರೂ ಅಧಿಕಾರಿಗೆ ಧನ್ಯವಾದ ಸೂಚಿಸಿ ಕುಳಿತರು.

‘ನಿಮ್ಮಿಂದ ಕೆಲವೊಂದು ಮಾಹಿತಿ ಬೇಕಾಗಿತ್ತು. ಅದಕ್ಕೆ ಇಲ್ಲಿಗೆ ಕರೆಸಿದೆ’ ಅಧಿಕಾರಿಗೆ ಬೇಕಾದ ಮಾಹಿತಿಗಳು ಯಾವುದೆಂದು ಇಬ್ಬರಲ್ಲೂ ಗೊಂದಲವಿತ್ತು.

‘ಸಾರ್, ದಯವಿಟ್ಟು ಕೇಳಿ’ ಮೇನಕಾ ಮುತುವರ್ಜಿ ವಹಿಸಿ ಹೇಳಿದಳು.

ಮೇನಕಾಳ ಮಾತಿಗೆ ಇನ್ಸ್‌ಪೆಕ್ಟರ್ ಮುಗುಳ್ನಕ್ಕ. ಮೇನಕಾಳಿಗೆ ಅನುಮಾನವಾಯಿತು ಅಧಿಕಾರಿಯ ವರ್ತನೆಯಿಂದ.

‘ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ’

ಇಬ್ಬರಿಗೂ ಅಧಿಕಾರಿಯ ಮಾತಿನ ಅರ್ಥ ತಿಳಿಯಲಿಲ್ಲ.

‘ಅಂದರೆ, ಲಹರಿಯ ಸುಳಿವು ಸಿಕ್ಕಿದೆ’ ಮಹಾಸ್ಫೋಟವಾದಂತೆ ಇಬ್ಬರ ಕಣ್ಣುಗಳಲ್ಲಿಯೂ ಹೊಳಪು ಮೂಡಿತು.

‘ಎಲ್ಲಿ? ಯಾವಾಗ?’

‘ಆತುರ ಪಡ್ಬೇಡಿ. ಎಲ್ಲಾ ಹೇಳ್ತೀನಿ’ ಮಾತು ನಿಲ್ಲಿಸಿ ಅಧಿಕಾರಿ ಬಜರ್ ಒತ್ತಿ ಪಿಸಿ ಸಾರಂಗನನ್ನು ಒಳಗೆ ಕರೆದ.

‘ಮೂರು ಕೆಟೀ ತರಿಸಯ್ಯಾ’ ಇನ್ಸ್‌ಪೆಕ್ಟರ್ ಹಣೆಯನ್ನು ಮೆತ್ತಗೆ ಒರೆಸಿಕೊಂಡು ಹೇಳಿದ.

ಸಾರಂಗ ಹೊರಗೆ ನಡೆಯುತ್ತಲೇ ಅಧಿಕಾರಿ ಮಾತಿಗಾರಂಭಿಸಿದ.

‘ನಮ್ಮ ತನಿಖೆಗೆ ತಡೆಯಾಗಿದ್ದು ಅನುಮಾನದ ಬೇಲಿಯ ಸುತ್ತಾ ಇದ್ದ ಹಲವಾರು ವಿಷಯಗಳು. ಆದರೆ ಅಪರಾಧಿ ಮಹಾಚಾಣಾಕ್ಷ ಅವನು ಆ ಬೇಲಿಯನ್ನು ದಾಟಿ ಒಳಗೆ ನಡೆದಿದ್ದ’

ಅರ್ಥವಾಗಲಿಲ್ಲ ಅಧಿಕಾರಿಯ ಮಾತು.

‘ಸಾರ್, ಯಾರಾತ?’ ಕಿರಣನ ಪ್ರಶ್ನೆಯಷ್ಟೇ ಮೇನಕಾಳ ಮುಖದಲ್ಲಿಯೂ ಕುತೂಹಲವಿತ್ತು.

‘ಹೇಳ್ತೀನಿ, ನಮ್ಮ ತನಿಖೆಗೆ ನಿಜವಾದ ತಿರುವು ಕಾಣಿಸಿಕೊಂಡದ್ದು ಕಣ್ಮರೆಯಾದ ಲಹರಿಯ ಬಟ್ಟೆಯಿಂದ’

‘ಅಂದ್ರೆ, ಲಹರಿ ಜೀವಂತವಾಗಿಲ್ವ?’ ಮೇನಕಾಳ ಆತಂಕದ ಪ್ರಶ್ನೆಗೆ ಇನ್ಸ್ಪೆಕ್ಟರ್ ಉತ್ತರಿಸಿದ.

‘ಹೆದರೋ ಅವಶ್ಯಕತೆಯಿಲ್ಲ. ಲಹರಿ ಜೀವಂತವಾಗಿದ್ದಾಳೆ’

ಮೇನಕಾ ಕಣ್ಣು ಮುಚ್ಚಿ ಧನ್ಯತೆ ಸೂಚಿಸುವಂತೆ ನಿಟ್ಟುಸಿರಿಟ್ಟಳು.

‘ಹಿತೇಶ ಅನ್ನೋ ಹುಡುಗ ಲಹರಿಯನ್ನ ಪ್ರೀತಿಸ್ತಿದ್ದ. ಆದರೆ ಲಹರಿಗೆ ಪ್ರೀತಿಗಿಂತಲೂ ಬಿಡುಗಡೆ ಬೇಕಿತ್ತು. ಬಿಡುಗಡೆ ಅಂದ್ರೆ ಮನೆಯ ವಾತಾವರಣದಿಂದ ಹೊರಗೆ ಬರಬೇಕಿತ್ತು. ಅದಕ್ಕಾಗಿ ಅವಳು ಸಮುದ್ರ ಕಿನಾರೆಗೆ ಬರ್ತಿದ್ದುದು. ಅಲ್ಲಿ ಈ ಹಿತೇಶನ ಭೇಟಿಯಾಯ್ತು. ಬಾಳ ಒಳ್ಳೆ ಹುಡುಗ. ಲಹರಿಯ ಬಗ್ಗೆ ತಲೆ ಕೆಡಿಸ್ಕೊಂಡ. ಇದು ಪಾಂಬು ಅನ್ನೋ ವ್ಯಕ್ತಿಗೆ ಗೊತ್ತಾಯ್ತು. ಪಾಂಬು ಹಾಗೂ ಹಿತೇಶ ಒಂದೇ ಕಡೆ ಕೆಲಸ ಮಾಡ್ತಿದ್ದೋರು. ಹಾಗಾಗಿ ಹಿತೇಶ ಪಾಂಬುನನ್ನು ನಂಬಿ ತನ್ನ ವಿಷಯವನ್ನೆಲ್ಲಾ ಹೇಳಿದ. ಆದರೆ ಪಾಂಬುಗೆ ಸುಲಭದಲ್ಲಿ ಹಣ ಗಳಿಸುವ ಖಯಾಲಿಯಿತ್ತು. ಅವನು ಲಹರಿ ಹಾಗೂ ಹಿತೇಶನನ್ನು ಹಿಂಬಾಲಿಸಿ, ಅವರಿಬ್ಬರ ವಿಷಯಗಳನ್ನು ಮೂರನೇ ವ್ಯಕ್ತಿಗೆ ಹೇಳಿದ’

‘ಯಾರಾತ?’ ಕಿರಣ ಮಧ್ಯೆ ಪ್ರಶ್ನಿಸಿದ.

‘ನಿಮಗೆ ಪಾಂಬುವಾಗಲಿ, ಹಿತೇಶನ ಬಗ್ಗೆಯಾಗಲಿ ಗೊತ್ತಿಲ್ಲ’

ಹೌದೆನ್ನುವಂತೆ ಇಬ್ಬರೂ ತಲೆಯಲುಗಿಸಿದರು.

‘ಆ ದಿನ ಆಲೆಮನೆಯ ಹತ್ತಿರದ ಬಲ್ಲೆಯಲ್ಲಿ ಒಬ್ಬ ವ್ಯಕ್ತಿ ಬಿದ್ದಿದ್ದ ಅಂದ್ರಲ್ಲ. ನೀವೂ ರಾಮಸ್ವಾಮಿಯೂ ಅವನನ್ನು ನೋಡಿದವರು’ ಅಧಿಕಾರಿ ಮೇನಕಾಗೆ ಹೇಳಿದ.

‘ಹೌದು, ನಾನಾಗ ಫಾರ್ಮ್ ಹೌಸ್‌ನಲ್ಲಿದ್ದೆ’

‘ಸರಿಯಾಗಿ ಹೇಳಿದ್ರಿ. ಆ ವ್ಯಕ್ತಿಯೇ ಹಿತೇಶ. ನೋಡೋದಿಕ್ಕೆ ನಿಮ್ಮ ಹಾಗೆ ಇದ್ದೋನು’ ಕಿರಣನನ್ನು ತೋರಿಸಿ ಹೇಳಿದ ಅಧಿಕಾರಿ.

‘ನಿಮಗೂ ಆತನಿಗೂ ತುಂಬಾನೇ ಹೋಲಿಕೆ ಇದೆ. ಹಾಗಾಗಿ ನನಗೂ ನಿಮ್ಮ ಮೇಲೆ ಅನುಮಾನವಿತ್ತು ನೀವಿಬ್ರೂ ಸಂಬಂಧಿಗಳೇನೋಂತ. ಆದ್ರೆ ನೀವು ಸಂಬಂಧಿಗಳಲ್ಲಾನ್ನೋದು ಆಮೇಲೆ ತಿಳಿಯಿತು. ಅದೂ ಕಾಕುಟ್ಟನಿಂದಾಗಿ. ಈ ಕಾಕುಟ್ಟನಿಗೂ ನಿಮ್ಮ ಡ್ಯಾಡಿ ಭುಜಂಗೇಶರಾಯರಿಗೂ ಆಗ್ತಿರ್ಲಿಲ್ಲ. ಕಾಕುಟ್ಟ ಸಮಯ ಕಾಯ್ತಾ ಇದ್ದ. ಅವನು ಸೇಡು ತೀರಿಸಿಕೊಳ್ಳುವ ನೆಪದಲ್ಲಿ ಲಹರಿಯನ್ನು ಹಿಂಬಾಲಿಸ್ತಿದ್ದ. ಲಹರಿ ಹಿತೇಶನ ಜೊತೆಗೆ ಓಡಾಡುವುದನ್ನು ನೋಡಿದ್ದ. ಹಾಗಾಗಿ ಅವಳು ಕಣ್ಮರೆಯಾದ ಮೇಲೆ ಹುಚ್ಚನಂತೆ ಮರಳು ದಿಣ್ಣೆಯಲ್ಲಿ ಅಲೀತಿದ್ದ ಹಿತೇಶನಿಗೆ ಪಾಂಬುವಿನ ಮೂಲಕ ಲಹರಿ ಫಾರ್ಮ್ ಹೌಸ್‌ನಲ್ಲಿದ್ದಾಳೆನ್ನುವ ಸುಳ್ಳು ಮಾಹಿತಿಯನ್ನು ಕೊಟ್ಟ. ಅದರಿಂದ ಹಿತೇಶ ಫಾರ್ಮ್ ಹೌಸ್‌ಗೆ ಬಂದ. ಅಲ್ಲಿ ಅವನನ್ನು ಮುಗಿಸುವ ಸಂಚು ಕಾಕುಟ್ಟನಿಗೆ. ಅವನಿಗೆ ಸಹಾಯಕ್ಕೆ ನಿಂತವನು ಪಾಂಬು’

‘ಅಂದ್ರೆ, ಆ ದಿನ ಅಲ್ಲಿ ಕಾಣಿಸಿಕೊಂಡಿರೋ ಇಬ್ರು, ಕಾಕುಟ್ಟ ಹಾಗೂ ಪಾಂಬು!’

‘ಹೌದು, ಅವರ ಉದ್ದೇಶವಿದ್ದದ್ದು ಹಿತೇಶನನ್ನು ಸಾಯಿಸೋದಲ್ಲ. ಬದಲಾಗಿ ಅವನ ಮೇಲೆ ಹಲ್ಲೆ ನಡೆಸಿ, ಆ ಆರೋಪ ಭುಜಂಗೇಶರಾಯರ ಮೇಲೆ ಬರಲಿ ಅನ್ನೋದಿಕ್ಕೆ’

‘ಮೇನಕಾ, ಆ ದಿನ ಪಾರ್ಟಿಗೆ ಬಂದಿದ್ದ ಕಾಕುಟ್ಟನಿಗೆ ನಿನ್ನ ಹೆದರಿಸಿ ಲಹರಿಯ ಬಗ್ಗೆ ತಿಳ್ಕೊಳ್ಳೋದು ಬೇಕಿತ್ತೇನೋ?’ ಕಿರಣನ ಮಾತಿಗೆ ಅಧಿಕಾರಿಯ ಹುಬ್ಬುಗಳು ಮೇಲೇರಿದವು.

‘ಅಂದ್ರೆ, ಮೇನಕಾಳನ್ನೂ ಆತ ಭೇಟಿಯಾಗಿದ್ದನೇ?’

‘ಹೌದು, ಆತ ನನ್ನ ಭೇಟಿಯಾಗಿದ್ದ. ಮಾತ್ರವಲ್ಲ, ನಾನೂ ಕಿರಣ ಪ್ರೀತಿಸ್ತಿ